# ತ್ಯಾಗ-ಭೋಗಗಳು ಸಾತ್ವಿಕತೆಯಿಂದ ನಮ್ಮನ್ನು ಮುನ್ನಡೆಸಲಿ ದೇವರಿಗೆ ತಲೆಬಾಗಿ ಬೆಳಕನ್ನು ಬೇಡೋಣ

ಕತ್ತಲಿನಿಂದ ಬೆಳಕಿನೆಡೆಗೆ ಸಾಗುವುದು ಬದುಕಿನ ಬಯಕೆ. ವೇದ, ಪುರಾಣ, ಇತಿಹಾಸ ಗ್ರಂಥಗಳೆಲ್ಲವೂ ನಮಗೆ ಈ ಸಂದೇಶವನ್ನು ನೀಡಿವೆ. ದೀಪಾವಳಿಯ ಈ ಹೊತ್ತು ನಮ್ಮ ಸಂದೇಶವೂ ಇದೇ ಆಗಿದೆ.

1997ರ ಫೆಬ್ರವರಿ ತಿಂಗಳಿನಲ್ಲಿ ಸುಬ್ರಹ್ಮಣ್ಯ ಮಠದ ನೂತನ ಯತಿಗಳಾಗಿ ಪೀಠಾರೋಹಣ ಮಾಡಿದ ಶ್ರೀ ವಿದ್ಯಾಪ್ರಸನ್ನ ತೀರ್ಥ ಶ್ರೀಗಳು ಶಾಸ್ತ್ರವಿದ್ಯಾಪಾರಂಗತರು. ಪೂರ್ವಾಶ್ರಮದಲ್ಲಿ ಬೆಂಗಳೂರಿನ ಪೂರ್ಣಪ್ರಜ್ಞ ವಿದ್ಯಾಪೀಠದ ವಿದ್ಯಾರ್ಥಿ. ಅನಂತರ ಅಲ್ಲೇ ಉಪನ್ಯಾಸಕರಾಗಿದ್ದು, ವಿಶೇಷ ಜ್ಞಾನ ಪಡೆದ ಸುಬ್ರಹ್ಮಣ್ಯ ಶ್ರೀಗಳು ವಿದ್ವತ್ಪೂರ್ಣ ಭಾಷಣ, ಪ್ರವಚನಗಳಲ್ಲಿ ಸಿದ್ಧಹಸ್ತರು. ಪೇಜಾವರ ಹಿರಿಯ ಯತಿಗಳ ಪರಮಶಿಷ್ಯರಾದ ಸುಬ್ರಹ್ಮಣ್ಯ ಶ್ರೀಗಳು ನಿರಂತರ ಜ್ಞಾನಪ್ರಸಾರಕರಾಗಿದ್ದಾರೆ. ನಿತ್ಯ ಅಧ್ಯಯನ ಹಾಗೂ ಶಿಷ್ಯರಿಗೆ ಅಧ್ಯಾಪನ, ಹಲವೆಡೆ ಪ್ರವಚನ, ಆಶೀರ್ವಚನ - ಇದು ಸುಬ್ರಹ್ಮಣ್ಯ ಶ್ರೀಗಳ ದಿನಚರಿ. ಬಿಳಿನೆಲೆಯಲ್ಲಿ ವಿದ್ಯಾಸಂಸ್ಥೆಗಳ ಸ್ಥಾಪನೆ ಮಾಡಿ ಮುನ್ನಡೆಸುತ್ತಿದ್ದಾರೆ. ಮಠದಲ್ಲಿ ನಿತ್ಯ ಪ್ರವಚನ- ಗಾಯನ- ವಾದನ- ನರ್ತನ- ಯಕ್ಷಗಾನದಂತಹ ಸದಭಿರುಚಿಯ ಕಲೆ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿ ಸುಬ್ರಹ್ಮಣ್ಯ ಮಠವು ಸಾಂಸ್ಕೃತಿಕ ಕೇಂದ್ರವಾಗಿ ರೂಪುಗೊಳ್ಳುವಲ್ಲಿ ಯತಿಗಳ ಕೊಡುಗೆ ಅಪಾರ.

ಇಂದಿನ ಮಾತಿನ ಮಂಟಪದಲ್ಲಿ ದೀಪಾವಳಿ ಹಬ್ಬದ ಕುರಿತು ಶ್ರೀಗಳು ಮಾತನಾಡಿದ್ದಾರೆ, ಹಬ್ಬದ ಶುಭಾವಸರದಲ್ಲಿ ಆಶೀರ್ವಾದಪೂರ್ವಕ ಸಂದೇಶವನ್ನು ಅನುಗ್ರಹಿಸಿದ್ದಾರೆ.



■ ಶ್ರೀ ವಿದ್ಯಾಪ್ರಸನ್ನ ತೀರ್ಥ ಶ್ರೀಗಳು
ಶ್ರೀ ಸುಬ್ರಹ್ಮಣ್ಯ ಮಠಾಧೀಶರು, ಸುಬ್ರಹ್ಮಣ್ಯ

■ ದೀಪಾವಳಿ ಹಬ್ಬಕ್ಕೆ ಉದಯವಾಣಿ ಸುದಿನ ಓದುಗರಿಗೆ

ತಮ್ಮ ಸಂದೇಶ...
ಕತ್ತಲಿನಿಂದ ಬೆಳಕಿನೆಡೆಗೆ ಸಾಗುವುದು ಬದುಕಿನ ಬಯಕೆ. ವೇದ, ಪುರಾಣ, ಇತಿಹಾಸ ಗ್ರಂಥಗಳೆಲ್ಲವೂ ನಮಗೆ ಈ ಸಂದೇಶವನ್ನು ನೀಡಿವೆ. ನಮ್ಮ ಸಂದೇಶವೂ ಇದೇ ಆಗಿದೆ.

■ ದೀಪಾವಳಿ ಹಬ್ಬದ ಮಹತ್ವವಾದರೂ ಏನು?

ನರಕಾಸುರನು ತನ್ನ ರಾಜಧಾನಿ ಪ್ರಾಗ್ಜ್ಯೋತಿಷಪುರ (ಬೆಳಕಿನ ನಗರ)ದಲ್ಲಿ ಕತ್ತಲೆಯ ಕೋಣೆಯಲ್ಲಿ ಕೂಡಿ ಹಾಕಿದ್ದ 16,100 ಹೆಣ್ಮಕ್ಕಳಿಗೆ ಬೆಳಕನ್ನು ತೋರಿಸಿದವರು ಶ್ರೀಕೃಷ್ಣ-ಸತ್ಯಭಾಮೆಯರು.

ನರಕಾಸುರನಿಗೆ ಒಂದು ವರವಿತ್ತು. ನರಕನ ತಂದೆ-ತಾಯಂದಿರು ಜತೆಗೂಡಿ ಇದಿರಿಸಿದರೆ ಮಾತ್ರ ಆವನಿಗೆ ಸಾವು ಎಂಬುದೇ ಆ ವರ. ಇದೊಂದು ಬಗೆಯ ಶಾಪವೂ ಹೌದು, ಮಗ ಅಂಕೆ ಮೀರಿ ಬೆಳೆದರೆ ತಾಯಿಯೇ ಶಸ್ತ್ರಹಿಡಿದು ಕೊಲ್ಲಬಹುದು ಎಂಬ ಸಂದೇಶವೂ ಹೌದು. ತನ್ನ ತಾಯಿಯ ಮರಣಾನಂತರ ನರಕ ವಿಜೃಂಭಿಸಿದ. ಕಂಡ ಕಂಡ ಹೆಂಗಳೆಯರನ್ನು ಹಿಡಿದು ಹಿಂಸಿಸಿದ, ಸೆರೆಮನೆಗೆ ಹಾಕಿದ. ಸ್ತ್ರೀ ಕ್ಷಮಾಗುಣಸಂಪನ್ನೆ, ಪ್ರಕೃತಿಯ ಪ್ರತಿರೂಪ. ಆದರೆ, ತಾಯಿಯೇ ಆದರೂ ಅನ್ಯಾಯ ಎಸಗುವ ಮಗನನ್ನು ಸಂಹರಿಸಲು ಹಿಂದೆಮುಂದೆ ನೋಡಲಾರಳು. ಆದುದರಿಂದ ತಾಯಿ ಸಾಯುವವರೆಗೆ ಒಂದಿಷ್ಟು ಹೆದರಿಯೇ ಇದ್ದ ನರಕಾಸುರನಿಗೆ ಮತ್ತೆ ಅಂಕೆ ಇಲ್ಲವಾಯಿತು.

ಇವನ ಸಂಹಾರಕ್ಕೆ ಶ್ರೀಕೃಷ್ಣ ಯುದ್ಧಕ್ಕಿಳಿದ. ಯುದ್ಧರಂಗದಲ್ಲಿ ಪ್ರಜ್ಞಾಹೀನನಾಗಿ ಬಿದ್ದ ಕೃಷ್ಣನ ಜತೆಗಿದ್ದ ಸತ್ಯಭಾಮೆ ಬತ್ತಳಿಕೆಯಿಂದ ಬಾಣ ತೆಗೆದು ಬಿಲ್ಲಿಗೆ ಹೂಡಿದಳು, ಪ್ರಯೋಗಿಸಿದಳು. ಬಾಣ ನರಕನ ದೇಹವನ್ನು ಹೊಕ್ಕಿತು. ಸಾವನ್ನು ಗೆದ್ದೆ ಎಂದು ಬೀಗುತ್ತಿದ್ದ ನರಕ ಸತ್ತುಬಿದ್ದ. ಸತ್ಯಭಾಮೆ ಹಿಂದಿನ ಜನ್ಮದಲ್ಲಿ ತನ್ನ ತಾಯಿಯಾಗಿದ್ದಳು ಎಂಬುದವನಿಗೆ ತಿಳಿದಿರಲಿಲ್ಲ, ನರಕನ ಅಂತ್ಯದೊಂದಿಗೆ ಲೋಕ ಸುಭಿಕ್ಷವಾಯಿತು. ಮುಖ್ಯವಾಗಿ, ಹದಿನಾರು ಸಾವಿರ ಸ್ತ್ರೀಯರ ಬಿಡುಗಡೆಯಾಯಿತು.

ಆಶ್ವಯುಜ -ಕಾರ್ತಿಕ ಮಾಸಗಳನ್ನು ವ್ಯಾಪಿಸುವ ದೀಪಾವಳಿ ಹಬ್ಬ ಅನೇಕ ಆಚರಣೆಗಳನ್ನೊಳಗೊಂಡಿದೆ. *ಜ್ಯೋತಿಃ ಶುಕ್ಲಶ್ಚ ತೇಜಃ ಚ ದೇವಾನಾಂ ಸತತಂ ಪ್ರಿಯಃ* - ಬೆಳಕು ದೇವತೆಗಳಿಗೆ ಪ್ರಿಯವಾದ ವಸ್ತು. ಬೆಳಕಿನ ಮೂಲಕ ದೇವತೆಗಳನ್ನು, ಪಿತೃಗಳನ್ನು ಸಂತೋಷಪಡಿಸಿ ಅನುಗ್ರಹ ಪಡೆಯುವ ಹಬ್ಬವನ್ನು ಆಚರಿಸಿ ನಾವೆಲ್ಲ ಉನ್ನತಿಯತ್ತ ಸಾಗೋಣ.

■ **ದೀಪಾವಳಿ ಆಚರಣೆ ಇಂದಿನ ದಿನಗಳಲ್ಲಿ ಮಹತ್ವ ಕಳೆದುಕೊಳ್ಳುತ್ತಿದೆಯೇ ?**

ಅಖಂಡ ಭಾರತದಲ್ಲಿ ಎಲ್ಲೆಡೆ ಆಚರಣೆಗೊಳ್ಳುವ ದೀಪಾವಳಿ ಹಬ್ಬವು ವಿದೇಶಗಳಲ್ಲೂ ಮಹತ್ವವನ್ನು ಪಡೆದಿದೆ. ಭಾರತದಲ್ಲಿ ಅತಿ ಹೆಚ್ಚು ಜನರು ಆಚರಿಸುವ ಹಬ್ಬ ದೀಪಾವಳಿ. ಆದ್ದರಿಂದ ಆಧುನಿಕ ಕಾಲದಲ್ಲೂ ಅದು ತನ್ನ ಮಹತ್ವವನ್ನು ಉಳಿಸಿಕೊಂಡಿದೆ. ಇತರೆಲ್ಲ ಹಬ್ಬಗಳಿಗಿಂತಲೂ ಹೆಚ್ಚಿನ ಮಹತ್ವ ಪಡೆದಿರುವ ಈ ಹಬ್ಬ ಮನುಜ ಕುಲಕ್ಕೆ ನವಚೈತನ್ಯ ನೀಡುತ್ತದೆ.

■ **ದೀಪಾವಳಿಗೆ ಆಧುನಿಕ ಸ್ಪರ್ಶ ಅವಶ್ಯವೇ ?**

ದೀಪಾವಳಿ ಹಬ್ಬ ಸಾರ್ವಕಾಲಿಕ ಆಚರಣೆಗೆ ಯೋಗ್ಯ. ಆದ್ದರಿಂದಲೇ ಪ್ರಾಚೀನ ಕಾಲದಿಂದ ಇಂದಿನವರೆಗೂ ಈ ಹಬ್ಬ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ. ಸಕಾಲಿಕ ಬದಲಾವಣೆ ಮೂಲಭೂತವಾದ ಧ್ಯೇಯ, ಉದ್ದೇಶಗಳಿಗೆ ಬಾಧಕವಾಗಬಾರದು. ಅಂತಹ ಸಣ್ಣಪುಟ್ಟ ಪರಿವರ್ತನೆಗಳು ನಮಗೆ ಅರಿವಿಲ್ಲದಂತೇ ಆವರಿಸುತ್ತವೆ. ಆದ್ದರಿಂದ ಆಧುನಿಕ ಸ್ಪರ್ಶ ಅನಾದರಣೀಯವೇನಲ್ಲ.

■ **ದೀಪಾವಳಿಯ ನೈಜ ಆಚರಣೆ ಹೇಗಿರಬೇಕು?**

ಸಮಸ್ತ ದೇವತೆಗಳಿಗೆ ತಲೆಬಾಗಿ ಬದುಕಿಗೆ ಬೆಳಕನ್ನು ಬೇಡುವ ಹಬ್ಬ ದೀಪಾವಳಿ. ಇದನ್ನು ಆಚರಣೆ ಮಾಡುವಾಗ ಈ ಚಿಂತನೆ ನಮ್ಮಿಂದ ದೂರವಾಗಿರಬಾರದು. ದಾನಶೀಲನಾದ ಬಲಿಗೆ ಗೌರವ ಕೊಡುವ ಸಂದರ್ಭ, ತ್ಯಾಗಶೀಲನಾದ ಅವನ ನೆನಪು ನಮ್ಮಲ್ಲಿರಬೇಕು. ತ್ಯಾಗ-ಭೋಗಗಳು ಸಾತ್ವಿಕತೆಯಿಂದ ನಮ್ಮನ್ನು ಮುನ್ನಡೆಸಬೇಕು. ಅಂತಹ ಆಚರಣೆ ನಮ್ಮದಾಗಿರಬೇಕೆಂಬುದೇ ನಮ್ಮ ಆಶಯ.

**ಮಾತುಕತೆ: ವಿಠಲ ರಾವ್**

# ಕೊಲೆ ಮಾಡಿ ಕೇರಳಕ್ಕೆ ಪರಾರಿಯಾದರೂ ಬಂಧನ ತಪ್ಪಲಿಲ್ಲ

■ಎಂ.ಎಸ್.ಭಟ್




**ಗಂಭೀರ ಅಪರಾಧ ಪ್ರಕರಣಗಳಲ್ಲಿ ಪಾಲ್ಗೊಂಡು ಬಳಿಕ ಪೊಲೀಸರ ಕೈಗೆ ಸಿಗದೆ ತಪ್ಪಿಕೊಳ್ಳುವುದು ಆರೋಪಿಗಳ ಜಾಯಮಾನ. ಇದು ಕೇವಲ ತಾತ್ಕಾಲಿಕ ಪರಿಹಾರ. ಕಾನೂನು ಇವರನ್ನು ಬಿಡುವುದಿಲ್ಲ, ತಿಂಗಳು, ವರುಷಗಳು ಕಳೆದರೂ ಆರೋಪಿ ಪೊಲೀಸರ ಕೈಗೆ ಸಿಗದೆ ಶಾಶ್ವತವಾಗಿ ತಪ್ಪಿಸಿಕೊಳ್ಳುವ ಸಾಧ್ಯತೆಗಳು ಕಡಿಮೆ.**

ಉಪ್ಪಿನಂಗಡಿ, ಅ. 21: ಸಂಬಂಧಿಕರು, ಬಂಧುಗಳು ಎಲ್ಲರೂ ದೂರವಿಟ್ಟು ಯಾರೂ ಹತ್ತಿರ ಸೇರಿಸಿಕೊಳ್ಳಲು ಹಿಂಜರಿಯುತ್ತಿದ್ದ ವ್ಯಕ್ತಿಗೆ ಆಶ್ರಯ ನೀಡಿ ಜೀವನದಲ್ಲಿ ಬದಲಾವಣೆಯಾಗಲು ಅವಕಾಶ ಮಾಡಿಕೊಟ್ಟ ಮನೆಗೆ ದ್ರೋಹ ಬಗೆದು ಕಾನೂನಿನ ಕೈಗಳಿಂದ ತಪ್ಪಿಕೊಳ್ಳಲು ನಡೆಸಿದ ವಿಫಲ ಯತ್ನದ ಪ್ರಕರಣವಿದು.

ಶಿರಾಡಿ ಗ್ರಾಮದ ಅಡ್ಡಹೊಳೆಯಲ್ಲಿ ಗಾರೆ ಕೆಲಸಗಾರ ರೋಹಿತ್ ತನ್ನ ಪತ್ನಿ ಸೌಮ್ಯಾ ಹಾಗೂ ಮೂರು ವರ್ಷ ಪ್ರಾಯದ ಪುತ್ರ ಜಿಷ್ಣು ಜತೆ ಸುಖ ಸಂಸಾರ ಮಾಡುತ್ತಿದ್ದರು. ಇವರ ಸಂಬಂಧಿಕ ಜಯೇಶ್ ಅಲ್ಲಿ ಇಲ್ಲಿ ಸಣ್ಣಪುಟ್ಟ ಅಪರಾಧಗಳನ್ನು ಮಾಡುತ್ತಾ ನ್ಯಾಯಾಲಯ ಹಾಗೂ ಪೊಲೀಸ್ ಠಾಣೆಗಳಿಗೆ ಅಲೆದಾಡುತ್ತಾ ಜೀವನ ಸಾಗಿಸುತ್ತಿದ್ದನು. ಈತನನ್ನು ಸಂಬಂಧಿಕರಾರೂ ಹತ್ತಿರ ಸೇರಿಸುತ್ತಿರಲಿಲ್ಲ.

ಕ್ರಿಮಿನಲ್ ಸ್ವಭಾವದ ಜಯೇಶ್‌ಗೆ ಜೀವನದಲ್ಲಿ ಬದಲಾಗಲು ರೋಹಿತ್ ಅವಕಾಶ ನೀಡಿ ತಮ್ಮ ಮನೆಯಲ್ಲಿ ಆಶ್ರಯ ನೀಡಿದರು. ಊಟ, ಬಟ್ಟೆ ನೀಡಿದರು. ದುಡಿದು ತಿನ್ನಲು ಪ್ರೇರಣೆ ನೀಡಿದರು. ಆದರೆ ತಾನು ಆಶ್ರಯ ನೀಡಿದ ವ್ಯಕ್ತಿಯೇ ತನ್ನ ಮಡದಿ ಮತ್ತು ಮಗುವನ್ನು ಕೊಲೆ ಮಾಡಿ ನಗ ನಗದುಗಳೊಂದಿಗೆ ಪರಾರಿಯಾಗಬಹುದು ಎಂದು ರೋಹಿತ್ ಊಹಿಸಿರಲಿಲ್ಲ.

**ಕೊಲೆ ಮಾಡಿ ಪರಾರಿಯಾದ**

ಹೀಗೆ ಜಯೇಶ್ ತನ್ನ ಸಂಬಂಧಿಕ ರೋಹಿತ್ ಮನೆಯಲ್ಲಿಯೇ ವಾಸವಾಗಿದ್ದನು. ಆದರೆ ಈತನೊಳಗಿದ್ದ ಕ್ರಿಮಿನಲ್ ಮನಃಸ್ಥಿತಿ ಮಾತ್ರ ಬದಲಾಗಿರಲಿಲ್ಲ, 2008 ಆಗಸ್ಟ್ 2ರಂದು ರೋಹಿತ್ ಗಾರೆ ಕೆಲಸಕ್ಕಾಗಿ ಸಕಲೇಶಪುರ ತಾಲೂಕಿನ ಮಾರನಹಳ್ಳಿಗೆ ಬೆಳಗ್ಗೆ ತೆರಳಿದ್ದರು. ಮನೆಯಲ್ಲಿ ಪತ್ನಿ ಸೌಮ್ಯ ಮತ್ತು ಪುತ್ರ ಜಿಷ್ಣು ಮಾತ್ರ ಇದ್ದರು. ಅಂದು ಸಂಜೆ ಜಯೇಶ್ ಸೌಮ್ಯಾಳ ಮೇಲೆ ಅತ್ಯಾಚಾರಕ್ಕೆ ಯತ್ನ ಮಾಡುತ್ತಾನೆ. ಆಕೆ ಪ್ರತಿಭಟಿಸಿದಾಗ ಆಕೆಯನ್ನು ಮತ್ತು ಆಕೆಯ 3 ವರ್ಷ ಪ್ರಾಯದ ಮಗನನ್ನು ಇರಿದು ಕೊಲ್ಲುತ್ತಾನೆ. ಬಳಿಕ ಮನೆಯಲ್ಲಿದ್ದ ನಗ ಮತ್ತು ನಗದಿನೊಂದಿಗೆ ಪರಾರಿಯಾಗುತ್ತಾನೆ.

ಉಪ್ಪಿನಂಗಡಿ ಪೊಲೀಸ್ ಠಾಣೆಯಲ್ಲಿ ಕೊಲೆ ಪ್ರಕರಣ ದಾಖಲಾಗುತ್ತದೆ. ಆರೋಪಿಯ ಹುಡುಕಾಟ ಆರಂಭವಾಗುತ್ತದೆ. ಆದರೂ ಆರೋಪಿ ಪತ್ತೆಯಾಗುವುದಿಲ್ಲ, 2012 ನವೆಂಬರ್ 18ರಂದು ಕೇರಳದ ಕೊಲ್ಲಂ ಜಿಲ್ಲೆಯ ಹಳ್ಳಿಯೊಂದರಲ್ಲಿ ಹೊಡೆದಾಟವಾಗುತ್ತದೆ. ಈ ಪ್ರಕರಣದಲ್ಲಿ ಆರೋಪಿ ಜಯೇಶ್ ಒಳಗೊಂಡಿರುತ್ತಾನೆ. ಈತ ಪೊಲೀಸರಿಂದ ತಪ್ಪಿಸಿಕೊಳ್ಳಲು ಮರಹತ್ತಿ ಕುಳಿತುಕೊಳ್ಳುತ್ತಾನೆ. ಪೊಲೀಸರು ಈತನನ್ನು ಬಂಧಿಸಿ ಕರೆದೊಯ್ಯುತ್ತಾರೆ.

ಕೊಲ್ಲಂ ಜಿಲ್ಲೆಯ ಸಣ್ಣಪಟ್ಟಣವೊಂದರಲ್ಲಿ ತರಕಾರಿ ವ್ಯಾಪಾರ ಮಾಡಿಕೊಂಡಿದ್ದ ಜಯೇಶ್ ಹೊಡೆದಾಟ ಪ್ರಕರಣದಲ್ಲಿ ಸಿಕ್ಕಿಬಿದ್ದಿದ್ದನು. ಈತನ ವಿಚಾರಣೆ ನಡೆಸಿದ ಕೇರಳ ಪೊಲೀಸರಿಗೆ ಈತ ಕರ್ನಾಟಕದಲ್ಲಿ ಕೊಲೆ ಪ್ರಕರಣವೊಂದರಲ್ಲಿ ಭಾಗಿಯಾಗಿ ಪರಾರಿಯಾದ ಆರೋಪಿ ಎಂದು ಗೊತ್ತಾಗುತ್ತದೆ. ದ.ಕ.ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಮೂಲಕ ಉಪ್ಪಿನಂಗಡಿ ಪೊಲೀಸರಿಗೆ ಮಾಹಿತಿ ರವಾನೆಯಾಗುತ್ತದೆ.

ಉಪ್ಪಿನಂಗಡಿ ಪೊಲೀಸರು ಕೊಲ್ಲಂಗೆ ತೆರಳಿ ನ್ಯಾಯಾಲಯದ ಮೂಲಕ ಜಯೇಶ್‌ನನ್ನು ತಮ್ಮ ವಶಕ್ಕೆ ಪಡೆದುಕೊಳ್ಳುತ್ತಾರೆ.

ಸೌಮ್ಯಾ ಮತ್ತು ಜಿಷ್ಣು ಕೊಲೆ ಪ್ರಕರಣದ ಆರೋಪಿಯಾಗಿದ್ದ ಈತನನ್ನು ಪುತ್ತೂರು ನ್ಯಾಯಾಲಯಕ್ಕೆ ಹಾಜರು ಪಡಿಸಲಾಗುತ್ತದೆ. ಆರೋಪಿಗೆ ನ್ಯಾಯಾಂಗ ಬಂಧನ ವಿಧಿಸಲಾಗುತ್ತದೆ. ಪ್ರಕರಣ ಈಗ ನ್ಯಾಯಾಲಯದಲ್ಲಿ ಇದೆ.




## ಬೈಕ್ – ಕಾರು ಢಿಕ್ಕಿ: ಗಾಯ

ಪುತ್ತೂರು, ಅ. 21: ನಗರದ ಬಪ್ಪಳಿಗೆ ಕ್ರಾಸ್‌ನಲ್ಲಿ ಮಾರುತಿ ಆಮ್ನಿ ಕಾರು ಮತ್ತು ಬೈಕ್ ಢಿಕ್ಕಿ ಹೊಡೆದು ಬೈಕ್ ಸವಾರ ಶಿವರಾಮ ಭಟ್ ಗಾಯಗೊಂಡು ಪುತ್ತೂರು ಆಸ್ಪತ್ರೆಗೆ ದಾಖಲಾಗಿದ್ದಾರೆ. ಪುತ್ತೂರು ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಆರ್ಲಪದವು: ಕ್ಷುಲ್ಲಕ ಕಾರಣಕ್ಕೆ ಹಲ್ಲೆ

ನಿಡ್ಪಳ್ಳಿ, ಅ. 21: ಪಾಣಾಜೆ ಗ್ರಾಮದ ಆರ್ಲಪದವಿನಲ್ಲಿ ಪುರಂದರ ಮೇಲೆ ಕ್ಷುಲ್ಲಕ ಕಾರಣದ ಹಿನ್ನೆಲೆಯಲ್ಲಿ ಪ್ರಮೋದ ಮತ್ತು ಅರ್ಷದ್ ಹಲ್ಲೆ ನಡೆಸಿದ ಘಟನೆ ನಡೆದಿದೆ. ಗಾಯಾಳು ಪುತ್ತೂರು ಆಸ್ಪತ್ರೆಗೆ ದಾಖಲಾಗಿದ್ದಾರೆ.

ಪ್ರತಿದೂರು: ಆರ್ಲಪದವಿನಲ್ಲಿ ಕ್ಷುಲ್ಲಕ ಕಾರಣದ ಹಿನ್ನೆಲೆಯಲ್ಲಿ ಪ್ರಮೋದ್ ಡಿ'ಸೋಜಾ ಮೇಲೆ ಪುರಂದರ ಮತ್ತು ನವೀನ ಹಲ್ಲೆ ನಡೆಸಿದ ಘಟನೆ ನಡೆದಿದೆ. ಗಾಯಾಳು ಪುತ್ತೂರು ಆಸ್ಪತ್ರೆಗೆ ದಾಖಲಾಗಿದ್ದಾರೆ. ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಜೀವ ಬೆದರಿಕೆ: ದೂರು ದಾಖಲು

ಕುಂಬ್ರ, ಅ. 21: ಒಳಮೊಗ್ರು ಗ್ರಾಮದ ದರ್ಬೆತ್ತಡ್ಕದಲ್ಲಿ ಮುರಳಿಯವರನ್ನು ಅವಾಚ್ಯಶಬ್ದಗಳಿಂದ ನಿಂದಿಸಿ ಜೀವ ಬೆದರಿಕೆ ಒಡ್ಡಿದ ಘಟನೆ ನಡೆದಿದೆ. ಆರೋಪಿಗಳಾದ ರಮೇಶ ಮತ್ತು ಆತನ ಮನೆಯ ಹೆಂಗಸರ ವಿರುದ್ಧ ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಬೈಕ್ ಪಲ್ಟಿ: ಇಬ್ಬರಿಗೆ ಗಾಯ

ಕಬಕ, ಅ. 21: ಕೊಡಿಪ್ಪಾಡಿಯಲ್ಲಿ ಬೈಕ್ ಪಲ್ಟಿ ಹೊಡೆದು ಸವಾರರಾದ ಪ್ರಕಾಶ ಸ್ವಿಕ್ವೇರ ಮತ್ತು ವಿಜಯ್ ಡಿ'ಸೋಜಾ ಗಾಯಗೊಂಡು ಪುತ್ತೂರು ಆಸ್ಪತ್ರೆಗೆ ದಾಖಲಾಗಿದ್ದಾರೆ. ಪುತ್ತೂರು ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಢಿಕ್ಕಿ ಹೊಡೆದು ಪರಾರಿಯಾಗಿದ್ದ ಕಾರು ಪತ್ತೆ

ಪುತ್ತೂರು, ಅ. 21: ನಗರದ ದರ್ಬೆಯಲ್ಲಿ ಕೆ.ಎಸ್.ಆರ್.ಟಿ.ಸಿ. ಸಿಬಂದಿಯಾದ ಗಿರೀಶ್, ಜಾಬಿರ್ ಹುಸೈನ್ ಮತ್ತು ಮಂಜುನಾಥರಿಗೆ ಢಿಕ್ಕಿ ಹೊಡೆದು ಪರಾರಿಯಾಗಿರುವ ಕಾರು ಪತ್ತೆಯಾಗಿದೆ. ಮಂಜಲ್ಪಡ್ಪುವಿನ ಉದ್ಯಮಿಯೊಬ್ಬರ ಕಾರು ಇದಾಗಿದೆ. ಕಾರಿನ ಚಾಲಕ ವಿಕ್ರಮ್ ಡಿ'ಸೋಜಾ ಅಪಘಾತ ನಡೆಸಿ ಕಾರು ಸಹಿತ ಪರಾರಿಯಾಗಿದ್ದನು. ಪುತ್ತೂರು ಸಂಚಾರ ಪೊಲೀಸರು ಬೆದ್ರಾಳ ಸಮೀಪ ಕಾರನ್ನು ವಶಕ್ಕೆ ಪಡೆದುಕೊಂಡಿದ್ದಾರೆ.

ಕೆಎಸ್‌ಆರ್‌ಟಿಸಿ ಸಿಬಂದಿಗೆ ಢಿಕ್ಕಿ ಹೊಡೆದು ಪರಾರಿಯಾಗಿದ್ದ ಕಾರನ್ನು ಬಂಧಿಸುವಲ್ಲಿ ಯಶಸ್ವಿಯಾದ ಪೊಲೀಸರ ತಂಡಕ್ಕೆ ಕೆಎಸ್‌ಆರ್‌ಟಿಸಿ ಪುತ್ತೂರು ಘಟಕ ವ್ಯವಸ್ಥಾಪಕ ಜೈಶಾಂತ್ ಕೃತಜ್ಞತೆ ಸಲ್ಲಿಸಿದ್ದಾರೆ.

## ವ್ಯಕ್ತಿ ನಾಪತ್ತೆ: ಪತ್ನಿಯಿಂದ ದೂರು

ಉಪ್ಪಿನಂಗಡಿ, ಅ. 21: ರೆಖ್ಯ ಗ್ರಾಮದ ನಿವಾಸಿ ಕೂಲಿ ಕಾರ್ಮಿಕ ಪರಮೇಶ್ವರ ಗೌಡ (50) ಅ. 17 ರಂದು ಉದನೆ ಪೇಟೆಗೆ ಹೋದವರು ನಾಪತ್ತೆಯಾಗಿದ್ದಾರೆ. ಅ. 18 ರಂದು ಉದನೆಯಲ್ಲಿ ತನ್ನ ಪುತ್ರನಿಗೆ ಇವರು ಸಿಕ್ಕಿದ್ದು, ಮನೆಗೆ ಬರುವುದಾಗಿ ತಿಳಿಸಿದ್ದರು. ಆದರೆ ಇವರು ನಾಪತ್ತೆಯಾಗಿದ್ದಾರೆ. ನಾಪತ್ತೆಯಾದವರ ಪತ್ನಿ ಮಮತಾ ಗೌಡ ನೀಡಿದ ದೂರಿನಂತೆ ಉಪ್ಪಿನಂಗಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ನಿರೀಕ್ಷಣಾ ಜಾಮೀನು

ಪುತ್ತೂರು, ಅ. 21: ನಗರದ ಎಪಿಎಂಸಿಯಲ್ಲಿ ಅಡಿಕೆ ಮತ್ತು ಕಾಡುತ್ಪತ್ತಿ ಖರೀದಿಸಿ ಗ್ರಾಹಕ ಬೆಳೆಗಾರರಿಗೆ 84 ಲಕ್ಷ ರೂ. ವಂಚನೆ ಮಾಡಿ ತಲೆಮರೆಸಿಕೊಂಡಿದ್ದ ಆರೋಪಿ ವರ್ತಕ ಎಸ್.ಅಬ್ದುಲ್ಲಾಗೆ ಪುತ್ತೂರು ಐದನೇ ಹೆಚ್ಚುವರಿ ಜಿಲ್ಲಾ ಸೆಷನ್ಸ್ ನ್ಯಾಯಾಲಯ ನಿರೀಕ್ಷಣಾ ಜಾಮೀನು ನೀಡಿದೆ. ಈ ಪ್ರಕರಣದಲ್ಲಿ ಕೆ.ಎಂ. ಇಲ್ಯಾಸ್ ಪ್ರಧಾನ ಆರೋಪಿಯಾಗಿರುತ್ತಾನೆ.

# ಅಮ್ಮ ಎಂಟರ್‌ಪ್ರೈಸಸ್: ಗುಣಮಟ್ಟದ ಸೋಲಾರ್ ವಾಟರ್ ಹೀಟರ್‌ಗೆ ಪ್ರಸಿದ್ಧಿ




ಪುತ್ತೂರು, ಅ.21: ಮಂಗಳೂರಿನ ಬಿಜೈಯಲ್ಲಿ ಮಾರಾಟ ಮಳಿಗೆಯನ್ನು ಹೊಂದಿರುವ ಅಮ್ಮ ಎಂಟರ್‌ಪ್ರೈಸಸ್ ಸಂಸ್ಥೆಯು ಕಳೆದ ಕೆಲವು ವರ್ಷಗಳಿಂದ ಶ್ರೇಷ್ಠ ಗುಣಮಟ್ಟದ ಸೋಲಾರ್ ವಾಟರ್ ಹೀಟರನ್ನು ಗ್ರಾಹಕರಿಗೆ ಅತ್ಯಂತ ಸ್ಪರ್ಧಾತ್ಮಕ ದರದಲ್ಲಿ ತಲುಪಿಸುವ ಮೂಲ ಮಂಗಳೂರಿನಾದ್ಯಂತ ಮನೆಮಾತಾಗಿದೆ.

ಸಂಸ್ಥೆಯಲ್ಲಿ ಎಲ್ಲಾ ಮಾದರಿಯ ಸೋಲಾರ್ ಲೈಟಿಂಗ್ ಸಿಸ್ಟಮ್‌ಗಳು ಲಭ್ಯವಿವೆ. ಅಮ್ಮ ಎಂಟರ್‌ಪ್ರೈಸಸ್ ಸಂಸ್ಥೆಯು ಪವರ್ ಇನ್‌ವರ್ಟರನ್ನು ಸೋಲಾರ್ ಇನ್‌ವರ್ಟರ್‌ಗೆ ಅತ್ಯಂತ ಕಡಿಮೆ ಖರ್ಚಿನಲ್ಲಿ ಕನ್‌ವರ್ಟ್ ಮಾಡಿ ಕೊಡುತ್ತದೆ.

ಅಮ್ಮ ಸೋಲಾರ್ ಸಿಸ್ಟಂ(ಟ್ರೇಡ್‌ಮಾರ್ಕ್) ಸಂಸ್ಥೆಯು ವಿಶೇಷವಾಗಿ ಕರಾವಳಿ ಪರಿಸರದ ನೀರು ಹಾಗೂ ಹವಾಗುಣಕ್ಕೆ ಒಗ್ಗುವಂತಹ ಸೋಲಾರ್ ವಾಟರ್ ಹೀಟರ್‌ನ್ನು ತಯಾರಿಸುವ ಕಂಪೆನಿಯಾಗಿ ಪ್ರಸಿದ್ಧಿ ಪಡೆದಿದೆ. ಕೇವಲ ಮಾರಾಟ ಮಾತ್ರವಲ್ಲದೆ 10 ವರ್ಷದ ಗ್ಯಾರಂಟಿಯೊಂದಿಗೆ ಮಾರಾಟದ ಅನಂತರದ ಸೇವಾಖಾತ್ರಿಯನ್ನು ನೀಡುತ್ತದೆ. ಹಬ್ಬದ ಪ್ರಯುಕ್ತ 30 ಶೇ. ವಿಶೇಷ ರಿಯಾಯಿತಿ ಹಾಗೂ ಎಕ್ಸ್‌ಚೇಂಜ್ ಆಫರನ್ನು ನೀಡುತ್ತಿದೆ. ಗ್ರಾಹಕರ ಅನುಕೂಲಕ್ಕಾಗಿ ಸಂಸ್ಥೆಯಲ್ಲಿ ಸುಲಭ ಕಂತಿನ ಮೂಲಕ ಮತ್ತು 708 ರೂ.ಗಳ 24 ಮಾಸಿಕ ಸ್ಕೀಂ ಪ್ರಾರಂಭಗೊಂಡಿದೆ. ತಿಂಗಳಲ್ಲಿ ವಿಜೇತರಾದ ಸದಸ್ಯರು ಮುಂದಿನ ಕಂತು ಕಟ್ಟಬೇಕಾಗಿಲ್ಲ, ಸದಸ್ಯರು ಸೋಲಾರ್ 150 ಎಲ್‌ಪಿಡಿ, 800 ವಿಎ ಇನ್‌ವರ್ಟರ್ +120 ಎಎಚ್ ಟ್ಯೂಬ್‌ಲರ್ ಬ್ಯಾಟರಿ ಅಥವಾ ಸೋಲಾರ್ ಲೈಟಿಂಗ್ ಸಿಸ್ಟಮ್(5ಲೈಟ್ಸ್) ಇವುಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಈ-ಮೇಲ್ ವಿಳಾಸ ammaenterprises5@rediffmail.com <mailto:ammaenterprises5@rediffmail.com> ಅಥವಾ ವೆಬ್‌ಸೈಟ್ ವಿಳಾಸ www.ammasolarsystem.com ವನ್ನು ಸಂಪರ್ಕಿಸಬಹುದು.

# ಬುದ್ಧನ ಭಾವಚಿತ್ರ ದಹನ: ಆಕ್ರೋಶ



ಕಡಬ ಉಪನಿರೀಕ್ಷಕ ಯೋಗೀಶ್‌ಕುಮಾರ್ ಅಧ್ಯಕ್ಷತೆಯಲ್ಲಿ ಸಭೆ ಜರಗಿತು.

ಕಡಬ, ಅ. 21: ವಾರ ಪತ್ರಿಕೆಯಲ್ಲಿ ದಲಿತರಿಗೆ ಸಂಬಂಧಿಸಿ ನಿಷೇಧಿತ ಪದ ಬಳಕೆಯ ಕಾರಣಕ್ಕಾಗಿ ಬೆಳ್ತಂಗಡಿಯಲ್ಲಿ ಜರಗಿದ ಪ್ರತಿಭಟನೆಯಲ್ಲಿ ಪ್ರತಿಕೃತಿ ದಹನದ ಸಂದರ್ಭ ದಲಿತ ನಾಯಕರು ದೇಶದ ಮಹಾನ್ ನಾಯಕ ಸಂವಿಧಾನ ಶಿಲ್ಪಿ ಡಾ| ಬಿ.ಆರ್. ಅಂಬೇಡ್ಕರ್ ಹಾಗೂ ಭಗವಾನ್ ಬುದ್ಧರ ಭಾವಚಿತ್ರವಿರುವ ಕರಪತ್ರವನ್ನು ದಹಿಸಿರುವುದು ಅಕ್ಷಮ್ಯ ಅಪರಾಧ ಎಂದು ದಲಿತ ಮುಖಂಡ ಗುರುವಪ್ಪ ಕಲ್ಲುಗುಡ್ಡೆ ಹಾಗೂ ನೂಜಿಬಾಳ್ತಿಲ ಗ್ರಾ.ಪಂ. ಮಾಜಿ ಅಧ್ಯಕ್ಷ ರಾಜು ಗೋಳಿಯಡ್ಕ ಹೇಳಿದರು.

ರವಿವಾರ ಕಡಬ ಪೊಲೀಸ್ ಠಾಣೆಯಲ್ಲಿ ಜರಗಿದ ಎಸ್.ಸಿ./ಎಸ್.ಟಿ. ಕುಂದುಕೊರತೆ ಸಭೆಯಲ್ಲಿ ಪ್ರತಿಭಟನೆ ನಡೆಸಿದವರ ವಿರುದ್ಧ ಕಾನೂನು ಹೋರಾಟ ನಡೆಸುವುದಾಗಿ ಹೇಳಿದರು.

ಕಡಬ ಪೊಲೀಸ್ ಉಪನಿರೀಕ್ಷಕ ಯೋಗೀಶ್ ಕುಮಾರ್ ಅಧ್ಯಕ್ಷತೆಯಲ್ಲಿ ಸಭೆ ಜರಗಿತು.

**ಗಿಫ್ಟ್ ಸ್ಕೀಂಗಳಿಂದ ವಂಚನೆ**

ಅಣಬೆಯಂತೆ ಹುಟ್ಟಿಕೊಳ್ಳುತ್ತಿರುವ ಗಿಫ್ಟ್ ಸ್ಕೀಂಗಳು ಸಾರ್ವಜನಿಕರಿಗೆ ಪಂಗನಾಮ ಹಾಕುತ್ತಿರುವ ಬಗ್ಗೆ ದಲಿತ ಮುಖಂಡರಾದ ವಸಂತ ಕುಬಲಾಡಿ, ರಾಜು ಗೋಳಿಯಡ್ಕ, ರಮೇಶ್ ಮೊದಲಾದವರು ಆರೋಪಿಸಿ ಇಂತಹ ಗಿಫ್ಟ್ ಸ್ಕೀಂಗಳಿಗೆ ಕಡಿವಾಣ ಹಾಕಬೇಕು ಎಂದು ಆಗ್ರಹಿಸಿದರು. ಅದಕ್ಕೆ ಉತ್ತರಿಸಿದ ಎಸ್‌ಐ ಯೋಗೀಶ್ ಕುಮಾರ್‌ರವರು ಗಿಫ್ಟ್ ಸ್ಕೀಂಗಳ ಬಗ್ಗೆ ಈಗಾಗಲೇ ಅನೇಕ ದೂರುಗಳು ಬರುತ್ತಿವೆ. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಎಂದು ಹೇಳಿದರು.

**ಕಡಬ ವ್ಯಾಪ್ತಿಯ ಎಲ್ಲ ಗ್ರಾ.ಪಂ.ನ ಪಿಡಿಒಗಳು ಕಾನೂನಿನ ಗುಮ್ಮ ತೋರಿಸಿ ಜನಸಾಮಾನ್ಯರ ಕೆಲಸ ಮಾಡದೆ ಸತಾಯಿಸುತ್ತಿದ್ದಾರೆ ಎಂದು ದೂರಿದ ದಲಿತ ಮುಖಂಡರು, ಉದ್ಯೋಗ ಖಾತರಿ ಹಾಗೂ ಸರಕಾರಿ ಸೌಲಭ್ಯಗಳನ್ನು ದಲಿತ ವರ್ಗಕ್ಕೆ ಒದಗಿಸುವಲ್ಲಿ ವಿಫಲರಾಗಿದ್ದಾರೆ ಎಂದು ಆರೋಪಿಸಿದರು.**

**ಗೋಮಾಳ ಜಾಗದಲ್ಲಿ ರಸ್ತೆ: ಆಕ್ಷೇಪ**

ಕೋಡಿಂಬಾಳ ಗ್ರಾಮದ ಮಡ್ಯಡ್ಕದಲ್ಲಿ ಪೊಡಿಯ ಸ್ವಾಧೀನವಿರುವ ಜಾಗದ ಮೂಲಕ ರಸ್ತೆಗೆ ಜಾಗ ಬಿಡಬೇಕೆಂದು ಆಗ್ರಹಿಸಿ ಈ ಬಗ್ಗೆ ಕಡಬ ಗ್ರಾ.ಪಂ. ನೀಡಿದ ಅನುಮತಿ ಪತ್ರವನ್ನು ಠಾಣಾಧಿಕಾರಿಯವರಿಗೆ ತೋರಿಸಿದ ಸ್ಥಳೀಯ ಕೃಷ್ಣ ರಸ್ತೆಗೆ ಜಾಗವನ್ನು ಬಿಡಿಸಬೇಕು ಎಂದು ಆಗ್ರಹಿಸಿದರು. ಆ ಸಂದರ್ಭದಲ್ಲಿ ಮಾತನಾಡಿದ ದಲಿತ ಮುಖಂಡ ಗುರುವಪ್ಪ ಕಲ್ಲುಗುಡ್ಡೆ ಅವರು, ದಲಿತರ ಸ್ವಾಧೀನವಿರುವ ಜಾಗದಿಂದ ರಸ್ತೆ ಕೇಳುತ್ತಿರುವುದು ಸರಿಯಲ್ಲ, ಈ ಬಗ್ಗೆ ಕಡಬ ಗ್ರಾ.ಪಂ.ನಿಂದ ಅನುಮತಿ ನೀಡಿದ್ದು ತಪ್ಪು, ಕೃಷ್ಣ ರಸ್ತೆ ಕೇಳುತ್ತಿರುವ ಜಾಗ ಗೋಮಾಳವಾಗಿದೆ. ಹೀಗಿದ್ದರೂ ಪಂಚಾಯತ್ ರಸ್ತೆಗೆ ಪರವಾನಿಗೆ ನೀಡಿದೆ ಎಂದು ಹೇಳಿದರು.

ಪೇರಡ್ಕದಿಂದ ಕುಟ್ರುಪಾಡಿವರೆಗಿನ ರಸ್ತೆ ಸಂಪೂರ್ಣ ಹದಗೆಟ್ಟಿದ್ದು ವಾಹನಗಳಿಗೆ ಸಂಚರಿಸಲು ಸಾಧ್ಯವಿಲ್ಲದಂತಾಗಿದೆ ಎಂದು ನೂಜಿಬಾಳ್ತಿಲ ಗ್ರಾ.ಪಂ. ಮಾಜಿ ಅಧ್ಯಕ್ಷ ರಾಜು ಗೋಳಿಯಡ್ಕ ಹಾಗೂ ನವೀನ್ ಹೇಳಿದರು.

ಪ್ರವೀಣ್ ಸ್ವಾಗತಿಸಿ, ಗುರುವಪ್ಪ ವಂದಿಸಿದರು. ಪ್ರಮೀಳಾ ಸಹಕರಿಸಿದರು.

## ಇಂದು ನಿಮ್ಮ ಗ್ರಹ ಬಲ

● ಎನ್.ಎಸ್. ಭಟ್

22-10-2014 ಬುಧವಾರ ಅದೃಷ್ಟ ಸಂಖ್ಯೆ: 4

**ಮೇಷ:** ಉದ್ಯೋಗ ವ್ಯವಹಾರಗಳಲ್ಲಿ ಲಾಭ ವಿದೆಯಾದರೂ ಕೈಗೆ ಬಂದ ತುತ್ತು ಬಾಯಿಗೆ ಬರದಂತಾದೀತು. ವಾಹನ ಚಾಲಕ, ಜಲಯಾನ, ರಕ್ಷಕ ಜನರಿಗೆ ಅನಿರೀಕ್ಷಿತ ಮುಂಭಡ್ತಿ ತಂದೀತು.

**ವೃಷಭ:** ಪತಿ ಪತ್ನಿಯರಿಬ್ಬರಿಗೂ ತಾಳ್ಮೆ ಸಮಾಧಾನ ವಿರಬೇಕು. ವಿದ್ಯಾರ್ಥಿಗಳು, ನಿರುದ್ಯೋಗಿಗಳು ತಮ್ಮ ಪ್ರಯತ್ನಬಲಕ್ಕೆ ಒತ್ತು ನೀಡಬೇಕು. ಸಾಮಾಜಿಕವಾಗಿ ಕಾರ್ಯಕ್ಷೇತ್ರದಲ್ಲಿ ನಿಮ್ಮ ಮುನ್ನಡೆ ಪ್ರಶಂಸನೀಯವಾದೀತು.

**ಮಿಥುನ:** ಪ್ರವಾಸ ಯಾತ್ರಾದಿಗಳಿಂದ ಖರ್ಚು ತಂದೀತು. ಸುಖ ಸಮಾಧಾನ ತಂದೀತು. ಆದಾಯ ಉತ್ತಮವಿದ್ದು ಕಾರ್ಯಸಾಧನೆಗೆ ಅನುಕೂಲವಾಗಲಿದೆ. ಅವಿವಾಹಿತರಿಗೆ ಶುಭವಾರ್ತೆ ತಿಳಿದು ಬಂದೀತು.

**ಕರ್ಕ:** ವಿಳಂಬಿತ ಆದಾಯ ಕಿರಿಕಿರಿ ತಂದೀತು. ಕಟ್ಟಡ ನಿರ್ಮಾಣ, ಭೂ ಖರೀದಿಗಳಿಗೆ ಅನುಕೂಲಕರವಾಗಲಿದೆ. ವಾಹನ ರಿಪೇರಿ, ನೂತನ ವಾಹನ ಖರೀದಿಗಳಿಗೆ ಧನವ್ಯಯ. ದಿನಾಂತ್ಯ ಶುಭವಾರ್ತೆ.

**ಸಿಂಹ:** ದೇವತಾ ಶ್ರದ್ಧೆ, ಭಕ್ತಿಗಳಿಗೆ ಒತ್ತು ನೀಡಿ ಕೌಟುಂಬಿಕ ಸುಖವೃದ್ಧಿಗೆ ಕಾರಣವಾಗುತ್ತದೆ. ಧನಾದಾಯ ವರ್ಧಿಸಲಿದೆ. ವೃತ್ತಿರಂಗದಲ್ಲಿ ಸ್ಥಾನಲಾಭವಿದೆ. ಮಾನಸಿಕ ಕ್ಲೇಶ ಆಗಾಗ ತೋರಿ ಬಂದೀತು.

**ಕನ್ಯಾ:** ಉನ್ನತ ವ್ಯಾಸಂಗಕ್ಕಾಗಿ ಖರ್ಚು ತಂದೀತು. ಋಣ ಭಾರಕ್ಕಾಗಿ ಧನ ವಿನಿಯೋಗ, ಶ್ರೀದೇವತಾ ಕೆಲಸಕಾರ್ಯಗಳಲ್ಲಿ ಆಸಕ್ತಿ ತಂದೀತು. ಆಗಾಗ ಪ್ರಯಾಣದಿಂದ ಕಾರ್ಯಸಿದ್ಧಿ ಆದರೂ ದೇಹಾಯಾಸ ಬಿಡದು.

**ತುಲಾ:** ವಿದ್ಯಾಭ್ಯಾಸದಲ್ಲಿ ವಿದ್ಯಾರ್ಥಿಗಳಿಗೆ ಹಿನ್ನಡೆ ತೋರಿ ಬಂದೀತು. ಸಣ್ಣ ಸಣ್ಣ ವಿಚಾರದಲ್ಲಿ ಕೂಡಾ ಕಲಹಗಳು ಗೋಚರಕ್ಕೆ ಬಂದಾವು. ದಾಯಾದಿಗಳಿಂದ ಹಿರಿಯರ ಆಸ್ತಿಗಾಗಿ ಕೋರ್ಟು ದರ್ಶನವಾದೀತು.

**ವೃಶ್ಚಿಕ:** ಮಹತ್ಕಾರ್ಯಗಳಿಗೆ ಸಕಾಲ. ನಿವೇಶನ ಖರೀದಿಯಂತಹ ಮಹಾ ಕಾರ್ಯಗಳಿಗೆ ಧನವ್ಯಯ ತಂದರೂ ಸಮಾಧಾನ ಸಿಗಲಿದೆ. ಕೋರ್ಟಿನ ವಿವಾದಗಳು ಬಗೆ ಹರಿದು ಸಂತಸ ತಂದಾವು.

**ಧನು:** ನೂತನ ಕಾರ್ಯಾರಂಭದಲ್ಲಿ ಶ್ರೇಯಸ್ಸಿದೆ. ಜೊತೆಗೆ ಗೌರವಾದರಗಳು ಸಿಗಲಿವೆ. ಸ್ವಾಮಿ ಕಾರ್ಯ-ಸ್ವಕಾರ್ಯಗಳು ಅನುಕೂಲವಾಗಲಿವೆ. ವೃತ್ತಿರಂಗದ ಸಹೋದ್ಯೋಗಿಗಳೊಂದಿಗೆ ಜಾಗ್ರತೆ ವಹಿಸಿರಿ.

**ಮಕರ:** ಕೋರ್ಟು ಕಚೇರಿ ಕಾರ್ಯ ಭಾಗದಲ್ಲಿ ಮುನ್ನಡೆ. ವೃತ್ತಿರಂಗದ ಸಹವರ್ತಿಗಳಿಂದ ಸಹಕಾರ ಇರುತ್ತದೆ. ಧನಾನುಕೂಲವಾದರೂ ಖರ್ಚುವೆಚ್ಚಗಳಲ್ಲಿ ಹಿಡಿತ ಇರಲಿ. ದೇವತಾ ಕಾರ್ಯಗಳಿಗಾಗಿ ಸಂಚಾರವಿದೆ.

**ಕುಂಭ:** ಸಾಂಸಾರಿಕವಾಗಿ ಸಮಾಧಾನ ತರುತ್ತದೆ. ರಾಜಕೀಯದಲ್ಲಿ ಅಪವಾದ ಭೀತಿ ಇದೆ. ಆಗಾಗ ಕಾರ್ಯಕ್ಷೇತ್ರದಲ್ಲಿ ಸಂಘರ್ಷದ ಪರಿಣಾಮದಿಂದ ಬೇಸರವಾಗಲಿದೆ. ದಿನಾಂತ್ಯದಲ್ಲಿ ಶುಭವಾರ್ತೆ ಕೇಳಿ ಬರಲಿದೆ.

**ಮೀನ:** ಚಿಂತಿಸಿ, ಯೋಚಿಸಿ ಮುಂದುವರಿಯಿರಿ. ಆರ್ಥಿಕವಾಗಿ ಉನ್ನತಿ ತುಸು ಸಮಾಧಾನಕರ, ವೃತ್ತಿರಂಗದಲ್ಲಿ ಹಿರಿಯ ಅಧಿಕಾರಿಗಳಿಗೆ ಮುಂಭಡ್ತಿ. ವಾರಾಂತ್ಯದಲ್ಲಿ ಚೇತೋಹಾರಿ ವಾತಾವರಣ ಸಮಾಧಾನ ತಂದೀತು.

## ನಿತ್ಯ ಪಂಚಾಂಗ

22-10-2014 ಬುಧವಾರ
ಜಯ ಸಂ|ರದ ತುಲಾ ಮಾಸ
ದಿನ 5 ಸಲುವ ಆಶ್ವಯುಜ ಬಹುಳ

ದಿನ ವಿಶೇಷ ■ ನರಕ ಚತುರ್ದಶಿ, ಗುಹ್ಯ ಅಗಸ್ತ್ಯೇಶ್ವರ ಜಾತ್ರೆ

| | | |
|---|---|---|
| ಚತುರ್ದಶಿ | | ೫೦|| ಗಳಿಗೆ |
| ಮಹಾನಕ್ಷತ್ರ | | ಚಿತ್ರಾ |
| ನಿತ್ಯನಕ್ಷತ್ರ | ಹಸ್ತಾ | ೫೦|| ಗಳಿಗೆ |
| ಋತು | | ಶರದೃತು |

| | |
|---|---|
| ರಾಹುಕಾಲ | 12.00-1.30 ಗಂಟೆ |
| ಗುಳಿಕಕಾಲ | 10.30-12.00 ಗಂಟೆ |
| ಸೂರ್ಯೋದಯ | 6.24 ಗಂಟೆ |
| ಸೂರ್ಯಾಸ್ತ | 6.08 ಗಂಟೆ |

## ಸುಡೊಕು - 3348

| | | | | | | | | |
|---|---|---|---|---|---|---|---|---|
| | 2 | | | 1 | 9 | | | 4 |
| | | | | | | 9 | | |
| 3 | 4 | | 6 | | | | 7 | |
| 5 | | | | 3 | | | 4 | 8 |
| | | | 1 | | 8 | | | |
| 7 | 9 | | | 4 | | | | 3 |
| | 7 | | | | 3 | | 1 | 2 |
| | | 3 | | | | | | |
| 1 | | | 5 | 6 | | | 9 | |

ಬುದ್ಧಿಗೆ ಕೆಲಸ ಕೊಡುವ ಸಂಖ್ಯಾ ಒಗಟು ಇದು. ತರ್ಕ ಬಳಸಿ ಈ ಒಗಟನ್ನು ಬಿಡಿಸಬಹುದು. ಎಲ್ಲ ಸಾಲುಗಳಲ್ಲಿ ಮತ್ತು ಕಂಬಗಳಲ್ಲಿ ಒಂದರಿಂದ ಒಂಬತ್ತು ಅಂಕಿಗಳಿರಬೇಕು. ಪ್ರತಿ 3×3 ಬಾಕ್ಸ್‌ನಲ್ಲೂ ಒಂದರಿಂದ ಒಂಬತ್ತರೊಳಗಿನ ಅಂಕಿಗಳಿರಬೇಕು ಮತ್ತು ಯಾವುದೇ ಅಂಕಿ ಪುನರಾವರ್ತನೆ ಆಗಬಾರದು.

ನಿನ್ನೆಯ ಸುಡೊಕುಗೆ ಉತ್ತರ

| | | | | | | | | |
|---|---|---|---|---|---|---|---|---|
| 9 | 7 | 5 | 3 | 4 | 1 | 8 | 6 | 2 |
| 1 | 2 | 6 | 7 | 8 | 9 | 3 | 4 | 5 |
| 3 | 8 | 4 | 5 | 2 | 6 | 9 | 7 | 1 |
| 8 | 3 | 2 | 6 | 9 | 5 | 4 | 1 | 7 |
| 6 | 9 | 1 | 4 | 3 | 7 | 2 | 5 | 8 |
| 4 | 5 | 7 | 8 | 1 | 2 | 6 | 9 | 3 |
| 5 | 6 | 8 | 2 | 7 | 4 | 1 | 3 | 9 |
| 7 | 1 | 3 | 9 | 6 | 8 | 5 | 2 | 4 |
| 2 | 4 | 9 | 1 | 5 | 3 | 7 | 8 | 6 |

## ಹನಿಗಾರಿಕೆ!

ಎಲ್ಲಾ ದಿನ

ದೀಪಾವಳಿಯಂದು
ಬೆಳಕು ನೀಡುವುದು
ಹಣತೆ
ವರ್ಷದ ಎಲ್ಲಾ ದಿನ
ಮನೆ ಮನ
ಬೆಳಗುತ್ತಾಳೆ ವನಿತೆ!

– ಎಚ್.ಡುಂಡಿರಾಜ್